# ಅಂತಾರಾಷ್ಟ್ರೀಯ ವಿಚಾರ ಚಿಂತನ

**ಚಿತ್ರದುರ್ಗ, ಜೂನ್ - 21,** ಬಸವಾದಿ ಶರಣರಿಗೆ ಮೊದಲು ಭಕ್ತಿಪಂಥ ಇತ್ತು. ಬಸವಣ್ಣನವರ ದೂರದೃಷ್ಟಿಯಿಂದ ಭಕ್ತಿಪಂಥವು ಭಕ್ತಿ ಪಥವಾಯಿತು. ಭಕ್ತಿ ಬದುಕಿಗೆ ಆಧಾರ. ಅದು ಶಿವಶರಣರ ಆಹಾರವೂ ಕೂಡ. ಇದನ್ನು ಶ್ರದ್ಧೆ, ವಿಶ್ವಾಸ, ವಿನಯ, ಸತ್ಯಸಂಧತೆ ಹಿನ್ನೆಲೆಯಲ್ಲಿ ನೋಡಬಹುದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಬಸವಕೇಂದ್ರ, ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ ಚಿತ್ರದುರ್ಗ ಹಾಗು ವಿಎಸ್‌ಎನ್‌ಎ ವಿಚಾರ ವೇದಿಕೆ, ಉತ್ತರ ಅಮೆರಿಕ ಇವರ ಸಹಯೋಗದಲ್ಲಿ ನಡೆದ ವಚನಕಾರ್ತಿ, ಭಕ್ತಿ, ಯುಕ್ತಿ, ಮುಕ್ತಿಯ ಶಕ್ತಿ ವಿಚಾರ ಕುರಿತು ಆನ್‌ಲೈನ್ ಮೂಲಕ ಚಿಂತನ ನಡೆಸಿದ ಶ್ರೀಗಳು, ಭಾರತೀಯ ಸಂಸ್ಕೃತಿಯೊಳಗೆ ಒಂದು ವಚನ ಸಂಸ್ಕೃತಿ, ಬಸವ ಸಂಸ್ಕೃತಿ ಇದೆ. 12ನೇ ಶತಮಾನದ ಮಹಾನ್ ಸಾಧಕಿ ಮುಕ್ತಾಯಕ್ಕ. ಮೋಳಿಗೆ ಮಹಾದೇವಿ ನಾವು ಜಂಗಮ ಸೇವೆ ಮಾಡಬೇಕು ಎಂದಿದ್ದಾರೆ. ಸತ್ಯಕ್ಕ, ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ ಕೂಡ ಉತ್ತಮ ವಿಚಾರಗಳನ್ನು ಕಟ್ಟಿಕೊಡುತ್ತಾಳೆ. ಬಸವ ಸಿದ್ಧಾಂತವು ಆದರ್ಶ ಜೀವನ ನಡೆಸಿದ ಉಜ್ವಲ ಉದಾಹರಣೆ ಇದೆ.

ಭಕ್ತಿ ನಮಗೆ ಯುಕ್ತಿಯನ್ನು ಕೊಡುತ್ತದೆ. ಅರಿವು ಸಂಬಂಧವುಳ್ಳ ಅಡಿಗಳಿಗೆ ನಾನು ಎರಗುವೆ ಎಂದು ಅಮುಗೆ ರಾಯಮ್ಮ ಹೇಳುತ್ತಾರೆ. ನಾವು ಕಾಯಕದ ಜೊತೆ ಲಿಂಗಪೂಜೆಯನ್ನು ಮಾಡಬೇಕು. ಸಾಮಾನ್ಯ ಕೆಲಸವನ್ನು ಕಾಯಕವನ್ನಾಗಿ ಮಾಡಬೇಕು. ಪ್ರತಿಯೊಬ್ಬರಲ್ಲು ಅರಿವು ಇರಬೇಕು. ನಡೆ ನುಡಿ ಒಂದಾಗದ ಭಕ್ತಿ ಅರಿವಿಗೆ ಹಾನಿಯನ್ನುಂಟು ಮಾಡುತ್ತದೆ ಎಂದು ಅಮುಗೆ ರಾಯಮ್ಮ ಹೇಳುತ್ತಾಳೆ.

ಯಾರಲ್ಲಿ ಶಕ್ತಿಯು ಸಾಂದ್ರವಾಗಿರುತ್ತದೆ ಎಂದರೆ ಭಕ್ತನಾದಡೆ ಬಸವಣ್ಣನಂತೆ, ಜಂಗಮವಾದಡೆ ಅಲ್ಲಮನಂತಾಗಬೇಕು, ಯೋಗಿಯಾದಡೆ ಸಿದ್ಧರಾಮನಂತಿರಬೇಕು, ಭೋಗಿಯಾದರೆ ಚೆನ್ನಬಸವಣ್ಣನಂತಾಗಬೇಕು ಎಂದು ದುಗ್ಗಳೆ ಹೇಳುತ್ತಾಳೆ. ಜ್ಞಾನ, ಕ್ರಿಯಾ, ಶಕ್ತಿ ನಮಗೆ ಬೇಕು. ಶರಣ ಸಿದ್ಧಾಂತದಲ್ಲಿ ಭಕ್ತಿ ಮತ್ತು ಶಕ್ತಿಗೆ ಮಹತ್ವ ಇದೆ. ಆದರೆ ಮುಕ್ತಿಗೆ ಹೆಚ್ಚಿನ ಪ್ರಾಶಸ್ತ್ಯವಿಲ್ಲ ಎಂದರು.

ವಿಎಸ್‌ಎನ್‌ಎ ಅಧ್ಯಕ್ಷ ಹರೀಶ್ ಹಿರೇಮಠ, ಗದಿಗೆಪ್ಪ ದೊಡ್ಡಮನಿ, ಸುರೇಶ್ ಶ್ರಾಫ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಚನ್ನಬಸಪ್ಪ ವಚನ ಪ್ರಾರ್ಥನೆ ಮಾಡಿದರು.

